ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ

ವಾರ್ಡ್ ಸಮಿತಿ ಸಭೆ, ದಿನಾಂಕ:25-02-2022 ರ ಸಭಾ ನಡವಳಿಗಳು

ದಿನಾಂಕ:25-02-2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್-79 ಸರ್ವಜ್ಞನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಎಂ.ಎಂ.ರಸ್ತೆಯಲ್ಲಿರುವ ಪಾಲಿಕೆಯ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಆರ್.ಡಬ್ಲ್ಯೂ.ಎ

1. ಶ್ರೀ.ಆರ್.ಮುರುಗನ್, ಸದಸ್ಯರು
2. ಶ್ರೀ.ಮಂಜುನಾಥ್, ಸದಸ್ಯರು
3. ಶ್ರೀ.ರಾಜವೇಲು, ಆರ್.ಡಬ್ಲ್ಯೂ.ಎ
4. ಶ್ರೀ.ಹೆಚ್.ರಾಹುಲ್, ಆರ್.ಡಬ್ಲ್ಯೂ.ಎ
5. ಶ್ರೀ.ರಾಮಚಂದ್ರನ್, ಸದಸ್ಯರು

ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು

1. ಶ್ರೀ.ಡಾ॥ಮಹಮೂದ್ ಅಬ್ಬಾಸ್ ನೋಡೆಲ್ ಅಧಿಕಾರಿಗಳು, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
2. ಶ್ರೀ.ಸಾಮಂದಯ್ಯ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
3. ಶ್ರೀ.ಮುನಿ ಯೆಲ್ಲಪ್ಪ, ಕಂದಾಯ ವಸೂಲಿಗಾರರು
4. ಶ್ರೀ.ಕಲ್ಲಪ್ಪ, HC ಬೈಯ್ಯಪ್ಪನಹಳ್ಳಿ ಪೊಲೀಸ್ ಠಾಣೆ,
5. ಶ್ರೀ.ಲೋಹಿತ್.ಕೆ.ಪ್ರಕಾಶ್ ಕಿರಿಯ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ(ಜೆಬಿಎನ್)
6. ಶ್ರೀ.ಡಿ.ಸುರೇಶ್, ಕಿರಿಯ ಅಭಿಯಂತರರು, ಬೆಸ್ಕಾಂ

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲಾ ಇಲಾಖೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು. ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಸಭೆಯಲ್ಲಿ ತಿಳಿಸಲು ಕೋರಿ ಸಭೆಯನ್ನು ಆರಂಭಿಸಲಾಯಿತು.

ಸಭೆಯಲ್ಲಿ ಚರ್ಚಿಸಿದ ವಿಷಯಗಳು:-

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಘನತ್ಯಾಜ್ಯ ನಿರ್ವಹಣೆ (SWM)** | |
| 1 | ಬಿ.ಬಿ.ಎಂ.ಪಿ ಕ್ವಾಟ್ರೆಸ್, ಕದಿರಯ್ಯನಪಾಳ್ಯ ಪ್ರಾರಂಭದಲ್ಲಿ ಹಾಗೂ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಕಸ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು. | Junior Health Inspector |
| | **ಕಾಮಗಾರಿ ಇಲಾಖೆ (Engineering)** | |
| 1 | ➢ ಬಂಡಪ್ಪ ಕಾಲೋನಿ ಹತ್ತಿರ ಡೆಬ್ರೀಸ್ ತೆಗೆಯುವುದು.<br>➢ ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸುವುದು.<br>➢ ಹೊಸ ಬೈಯ್ಯಪ್ಪನಹಳ್ಳಿ ಇಂದಿರಾ ಸ್ಲಂನಲ್ಲಿರುವ ಸಾರ್ವಜನಿಕ ಶೌಚಾಲಯವನ್ನು ಹೊಸದಾಗಿ ನಿರ್ಮಿಸಿ ನಿರ್ವಹಣೆ ಮಾಡುವುದು.<br>➢ ಪಿ.ಎಸ್.ಕೆ.ನಾಯ್ಡು ರಸ್ತೆಯ ಪುಟ್‌ಪಾತ್ ಎಸ್.ಎಸ್.ರೇಲಿಂಗ್ಸ್ ಅಳವಡಿಸುವುದು.<br>➢ ಪಿ.ಎಸ್.ಕೆ.ನಾಯ್ಡು ರಸ್ತೆ, ಕಾಠೇರಮ್ಮ ದೇವಸ್ಥಾನ ಹತ್ತಿರವಿರುವ ಸರ್ಕಾರಿ ಕಟ್ಟಡದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲು ಜಿಮ್ ಅಥವಾ ಗ್ರಂಥಾಲಯವನ್ನು ತೆರೆಯಲು ಕೋರಲಾಯಿತು. | Assistant Engineer-BBMP |
| | **ಕಂದಾಯ ಇಲಾಖೆ(Revenue Department)** | |
| 2 | ➢ ಕಾಕ್ಸ್‌ಟೌನ್‌ನಲ್ಲಿರುವ ಆರೋಗ್ಯ ಇಲಾಖೆಯ ಹೆರಿಗೆ ಆಸ್ಪತ್ರೆಯ ಒಟ್ಟು ವಿಸ್ತೀರ್ಣವನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಖಾತಾ ಪ್ರಮಾಣ ಪತ್ರ, ಖಾತಾ ನಕಲು ಪ್ರತ್ಯೇಕವಾಗಿ ಮಾಡಿಕೊಡಲು ಕಂದಾಯ ಇಲಾಖೆಯವರು ಕೂಡಲೇ ಕ್ರಮ ಕೈಗೊಂಡು ವರದಿ ನೀಡಲು ಸಭೆಯಲ್ಲಿ ತಿಳಿಸಿದರು. | ಕಂದಾಯ/ಸಹ ಕಂದಾಯ ಅಧಿಕಾರಿಗಳು |
| | **ಬೆಂಗಳೂರು ಜಲ ಮಂಡಳಿ (BWSSB)** | |

| | | |
|---|---|---|
| 4 | ➢ ಹೊಸ ಬೈಯ್ಯಪ್ಪನಹಳ್ಳಿ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯ ದೂರುಗಳಿಗೆ ಸ್ಪಂಧಿಸಿ ಕ್ರಮ ಕೈಗೊಂಡಿರುವ ಬಗ್ಗೆ ಹಾಗೂ ಹೊಸದಾಗಿ ಒಳಚರಂಡಿ ಪೈಪ್‌ಲೈನ್‌ಗಳನ್ನು ಅಳವಡಿಸುವುದರ ಬಗ್ಗೆ ಕಿರಿಯ ಅಭಿಯಂತರರಾದ ಶ್ರೀ.ಲೋಹಿತ್ ರವರು ತಿಳಿಸಿದರು.<br>➢ ಕದಿರಯ್ಯನಪಾಳ್ಯ ಪ್ರದೇಶದಲ್ಲಿ ಕುಡಿಯುವ ನೀರಿನ ಒತ್ತಡವನ್ನು ಹೆಚ್ಚಿಸಿ ನೀಡರನ್ನು ಸಮರ್ಪಕವಾಗಿ ಒದಗಿಸಲು ಕೋರಲಾಯಿತು. | Assistant Engineer-BWSSB |
| | ಬೆಸ್ಕಾಂ ಇಲಾಖೆ (BESCOM) | |
| 5 | ➢ ಹೊಸ ಬೈಯ್ಯಪ್ಪನಹಳ್ಳಿ ಪ್ರದೇಶದಲ್ಲಿ 8ನೇ ಅಡ್ಡರಸ್ತೆ, ಬಂಡಪ್ಪ ಕಾಲೋನಿ, ಇಂದಿರಾ ಸ್ಲಂ, ಕೃಷ್ಣ ಮೂರ್ತಿ ಕಾಲೋನಿ, ಅಯ್ಯಪ್ಪ ಸ್ವಾಮಿ ದೇವಸ್ಥಾನ ಸುತ್ತ-ಮುತ್ತಲಿನ ವಿದ್ಯುತ್ ಕಂಬಗಳು ವಾಲಿಕೊಂಡಿದ್ದು, ಹಾಗೂ ಬೀಳುವ ಹಂತದಲ್ಲಿರುತ್ತದೆ. ಇದನ್ನು ಕೂಡಲೇ ಹೊಸದಾಗಿ ಅಳವಡಿಸಲು ತಿಳಿಸಲಾಯಿತು. | ಸಹಾಯಕ ಅಭಿಯಂತರರು ಬೆಸ್ಕಾಂ |
| | ಬೃಹತ್ ನೀರುಗಾಲುವೆ (SWD Dept) | |
| 6 | ➢ ಹೊಸ ಬೈಯ್ಯಪ್ಪನಹಳ್ಳಿ, ಬಂಡಪ್ಪ ಕಾಲೋನಿ ಮತ್ತು ಸುತ-ಮುತ್ತಲಿನ ಪ್ರದೇಶಗಳಲ್ಲಿರುವ ಬೃಹತ್ ನೀರುಗಾಲುವೆಯಲ್ಲಿ ತುಂಬಿರುವ ಹೂಳನ್ನು ತಗೆಯಲು ತಿಳಿಸಲಾಯಿತು.<br>➢ ಪಿ.ಎಸ್.ಕೆ.ನಾಯ್ಡು ರಸ್ತೆ, ಕಾಳೇಮ್ಮ ದೇವಸ್ಥಾನ ಹಿಂಭಾಗದಲ್ಲಿ ಹಾಳೀ ಇರುವ ಬೃಹತ್ ನೀರುಗಾಲುವೆಯ ಗೋಡೆಗಳಿಗೆ ಪಾಯಿಟಿಂಗ್ ಮಾಡಲು ಸೂಚಿಸಿದರು. | ಸಹಾಯಕ ಅಭಿಯಂತರರು ಬೃಹತ್ ನೀರುಗಾಲುವೆ |
| | ಬಿ.ಬಿ.ಎಂ.ಪಿ ಸ್ಟ್ರೀಟ್‌ಲೈಟ್ಸ್ (Street Lights) | |
| 7 | ➢ ಪಿ.ಎಸ್.ಕೆ.ನಾಯ್ಡು ರಸ್ತೆ, ಕಳ್ಳಹಳ್ಳಿ ಸ್ಮಶಾಣದ ಒಳಭಾಗದಲ್ಲಿ ಹಾಗೂ ರಸ್ತೆಯಲ್ಲಿ, ಹೊಸ ಬೈಯ್ಯಪ್ಪನಹಳ್ಳಿ ಇಂದಿರಾ ಸ್ಲಂನಲ್ಲಿ ಬೀದಿ ದೀಪಗಳು ಇಲ್ಲದೇ ಇರುವುದಿಲ್ಲವಾದ್ದರಿಂದ ಕೂಡಲೇ ಸದರಿ ರಸ್ತೆಗಳಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಸೂಚಿಸಲಾಯಿತು. | Assistant Engineer-Street Lights |
| | ಪೋಲೀಸ್ ಇಲಾಖೆ, ಕಾ&ಸು (POLICE DEPARTMENT) | |
| 8 | ➢ ವಾರ್ಡ್ ವ್ಯಾಪ್ತಿಯಲ್ಲಿ ರಾತ್ರಿ ಹಾಗೂ ಹಗಲು ಪಾಳಯಲ್ಲಿ ಬೀಟ್ ಪೋಲೀಸರನ್ನು ನಿಯೋಜಿಸಿ ಸಾರ್ವಜನಿಕರಿಗೆ ಸೂಕ್ತ ರಕ್ಷಣೆಯನ್ನು ನೀಡಲು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಹಿಂದಿನ ಸಭೆಯಲ್ಲಿ ಕೋರಿದರು ಇದಕ್ಕೆ ಸಂಬಂಧಿಸಿದಂತೆ, ಈಗಾಗಲೇ ಬೀಟ್ ಪೋಲೀಸರನ್ನು ರಾತ್ರಿಪಾಳಯಲ್ಲಿ ನಿಯೋಜಿಸಲಾಗಿದ್ದು ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೋಲೀಸರು ತಿಳಿಸಿದರು.. | Police Departmrnt |
| | ಸಂಚಾರ ಪೋಲೀಸ್ ಇಲಾಖೆ TRAFIC POLICE DEPARTMENT | |
| 9 | ➢ ಪಿ.ಎಸ್.ಕೆ.ನಾಯ್ಡು ರಸ್ತೆಯ ಸೆಂಟ್ ಅಲೋಶಿಯಸ್ ಕಾಲೇಜು ಕಾಂಪೌಂಡ್ ವಾಲ್ ಹತ್ತಿರ ಪೋಲೀಸ್ ಚೌಕಿಯನ್ನು ನಿರ್ಮಿಸಲು ತಿಳಿಸಲಾಯಿತು.<br>➢ ಸಿಂಧಿ ಜಂಕ್ಷನ್ ಬಳಿ ಸುಲಭವಗಿ ಎಡ ತಿರುವನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸದರಿ ಸ್ಥಳದ ಹತ್ತಿರದಲ್ಲಿ ರಸ್ತೆ ಪಕ್ಕದ ಚರಂಡಿಯ ಕವರಿಂಗ್ ಸ್ಲಾಬ್ ಅಳವಡಿಸಲು ಕಾಮಗಾರಿ ಇಲಾಖೆಯವರಿಗೆ ಸಭೆಯಲ್ಲಿ ಕೋರಿದರು. | Trafic Police Departmrnt |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳು

ಶ್ರೀ.ಸಾಮಂದಯ್ಯ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:79 ಸರ್ವಜ್ಞನಗರ

ಅಧ್ಯಕ್ಷರು

ಡಾ॥ಮಹಮೂದ್ ಅಬ್ಬಾಸ್
ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:79-ಸರ್ವಜ್ಞನಗರ